

ಅರವತ್ತು ವರ್ಷಗಳ ಸುದೀರ್ಘ ರಂಗಪಯಣದ ಕೆಲವು ನೆನಪುಗಳು

# ರಂಗಸರಸ್ವತಿ ಜುಲೇಖಾ ಬೇಗಂ



■ ರಾಹುಲ ಬೆಳಗಲಿ

'ನನಗೀಗ ವಯಸ್ಸು 77. ಮೈಯೊಳಗಿನ ಶಕ್ತಿ ಕೊಂಚ ಕಡಿಮೆಯಾಗಿದೆ. ಆದರೆ, ಉತ್ಸಾಹ ಕುಂದಿಲ್ಲ. ರಂಗಭೂಮಿಯಲ್ಲಿ ಈಗಲೂ ಅವಕಾಶ ಸಿಕ್ಕರೆ, ಕೊಟ್ಟ ಪಾತ್ರಕ್ಕೆ ಜೀವ ತುಂಬುವೆ. ನಾಟಕ ಪ್ರದರ್ಶಿಸುತ್ತಲೇ ಕೊನೆಯುಸಿರು ಎಳೆಯಲು ಬಯಸುವೆ.'

ಹೀಗೆ ಭಾವನಾತ್ಮಕವಾಗಿ ಮಾತಿಗೆ ತೊಡಗಿದ ಜುಲೇಖಾ ಬೇಗಂ, ಆರು ದಶಕಗಳಿಗೂ ಹೆಚ್ಚು ಕಾಲದಿಂದ ವೃತ್ತಿ ರಂಗಭೂಮಿಯಲ್ಲಿ ತೊಡಗಿಕೊಂಡಿರುವ ಕಲಾವಿದೆ. ಅವರ ನಿಜವಾದ ಹೆಸರು ಸರಸ್ವತಿ. ರಂಗಜೀವನದ ಹಲವಾರು ಏಳುಬೀಳುಗಳನ್ನು ಸಮನಾಗಿ ಸ್ವೀಕರಿಸುತ್ತ ಅವರು ಬದುಕು ಕಟ್ಟಿಕೊಂಡಿದ್ದಾರೆ.

ಮಕ್ಕಳೊಂದಿಗೆ ಸದ್ಯಕ್ಕೆ ಮೈಸೂರಿನಲ್ಲಿ ನೆಲೆಸಿರುವ ಜುಲೇಖಾ ಅವರು ಈಗಲೂ ರಂಗಭೂಮಿಯ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದಾರೆ. 'ಜನರಿಗೆ ಮನರಂಜನೆ ನೀಡುವುದರ ಜೊತೆಗೆ ಹೊಸ ಸಂಗತಿಯನ್ನು ತಿಳಿಸಬೇಕಿದ್ದರೆ, ಅದು ರಂಗಭೂಮಿಯಿಂದ ಮಾತ್ರ ಸಾಧ್ಯ' ಎಂಬ ಗಾಢ ನಂಬಿಕೆ ಅವರದ್ದು.

ಜುಲೇಖಾ ಅವರೊಂದಿಗಿನ ಮಾತುಕತೆ ವ್ಯಕ್ತಿಯೊಬ್ಬರೊಂದಿಗಿನ ಮಾತುಕತೆಯಂತೆ ಕಾಣಿಸುವುದಿಲ್ಲ. ಅದು ರಂಗಭೂಮಿಯ ತಲೆಮಾರುಗಳೊಂದಿಗಿನ ಮುಖಾಮುಖಿಯಂತೆ ಕಾಣಿಸುತ್ತದೆ. ಅದಕ್ಕೆ ಕಾರಣ, ಜುಲೇಖಾ ಅವರ ಅನುಭವ ಶ್ರೀಮಂತಿಕೆ. ಇತ್ತೀಚೆಗೆ ಮಾತಿಗೆ ಸಿಕ್ಕ ಅವರು ತಮ್ಮ ರಂಗಪಯಣವನ್ನು ನೆನಪಿಸಿಕೊಂಡಾಗ ಕನ್ನಡನಾಡಿನ